೨೦-೮-೮೬ರ 'ಉದಯವಾಣಿ' ಪತ್ರಿಕೆಯ ದೂರು ಗಂಟೆಯಲ್ಲಿ ೪೦ಕ್ಕೂ ಹೆಚ್ಚು ಜನರು ಸಹಿ ಹಾಕಿದ ಪತ್ರ ಪ್ರಕಟವಾಗಿರುತ್ತದೆ. ಆದಕಾರಣ ಗೊಂದಲಕ್ಕೆ ಆಸ್ಪದವಾಗದಂತೆ ತೆರೆಯಲು ಯೋಚಿಸಿರುವ ಶರಾಬು ಅಂಗಡಿಯನ್ನು ಬೇರೆ ತೊಂದರೆಯಾಗದ ಸೂಕ್ತ ಸ್ಥಳಕ್ಕೆ ವರ್ಗಾವಣೆ ಮಾಡುವುದು ಹಿತಕರ. ಈ ಕುರಿತು ಅಬ್ಕಾರಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಂಗಳೂರು ಸಮೀಪದ ಅಡ್ಯಾರ್ ಕಣ್ಣೂರು ಎಂಬಲ್ಲಿ ಶರಾಬು ಅಂಗಡಿಯನ್ನು ತೆರೆಯುವುದಕ್ಕೆ ಯಾವ ಪರವಾನಗಿಯನ್ನು ಕೊಟ್ಟಿರುವುದಿಲ್ಲ, ಮೇಲ್ಕಾಣಿಸಿದ ಸ್ಥಳದಲ್ಲಿ ಬಾರ್, ಅಂಗಡಿಯನ್ನು ತೆರೆಯಲಿಕ್ಕೆ ಅರ್ಜಿ ಬಂದಿದ್ದು ಅದರ ಮೇಲೆ ದೂರುಗಳು ಬಂದಿರುವುದರಿಂದ ಇದುವರೆಗೆ ಅರ್ಜಿಯನ್ನು ಪರಿಗಣಿಸಿರುವುದಿಲ್ಲ. ದೂರು ಅರ್ಜಿಯನ್ನು ವಿಚಕ್ಷಣೆಗೆ ಕಳುಹಿಸಿಕೊಡಲಾಗಿದ್ದು ಮೇಲ್ಕಂಡ ದೂರು ನಿಜವೆಂದು ಕಂಡುಬಂದಲ್ಲಿ ಆ ಸ್ಥಳದಲ್ಲಿ ಶರಾಬು ಅಂಗಡಿಯನ್ನು ತೆರೆಯುವುದಕ್ಕೆ ಪರವಾನಗಿಯನ್ನು ಕೊಡಲಾಗುವುದಿಲ್ಲ.

೮ ಹುಬ್ಬಳ್ಳಿಯ ಬಂಕಾಪುರದಲ್ಲಿ ಮತೀಯ ಗಲಭೆ ಉಂಟಾಗಿರುವುದು

SRI M. S. KRISHNAN.—It is reported in today's paper (Deccan Hearld) that seven persons were injured in a communaclash at Bankapur Chowk Hubli on 20-8-86. Though the situation is stated to be peaceful, the matter is very serious. Serious because this as occurred in the background of the Ramanagaram and Aland Communal Clashes. The action taken by the Government should be spelt out. Hence I draw the attention of the Home Minister to the Communal Clash at Hubli.

ಶ್ರೀ ಬಿ. ರಾಚಯ್ಯ.—ರಾಮನಗರ, ಆಳಂದ್ ಹಾಗೂ ಬೇರೆ ಕಡೆಗಳಲ್ಲಿ ಆದಂತಹ ಈ ಒಂದು ಕೋಮುವಾರು ಗಲಭೆಯ ಹಿನ್ನೆಲೆಯಲ್ಲಿ ಹುಬ್ಬಳ್ಳಿ ಹತ್ತಿರ ಸ್ವಲ್ಪಗಲಭೆಯಾಗಿದೆ ಅದನ್ನು ತೀವ್ರತರವಾಗಿ ಆಗದಂತೆ ನೋಡಿಕೊಳ್ಳಬೇಕೆಂದು ಕೃಷ್ಣನ್ ಅವರು ಸೂಚನೆಯಾಗಿ ತಿಳಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಸೂಕ್ತವಾದ ಒಂದು ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ ಮತ್ತು ಸಾಕಷ್ಟು ಪ್ರಮಾಣದಲ್ಲಿ ಅಲ್ಲಿ ಪೋಲೀಸರನ್ನು ಇಟ್ಟು ಬಂದೂಬಸ್ತು ಮಾಡಬೇಕು ಹಾಗೂ ಮುಂದಕ್ಕೆ ಇದು ಹರಡದಂತೆ ನೋಡಿಕೊಳ್ಳಬೇಕೆಂದು ತಿಳಿಸಿದ್ದೇವೆ.

೧೧-೦೦ ಎ. ಎಂ.

೯ ಹಿರಿಯೂರು ತಾಲ್ಲೂಕಿನ ಸೊಂಡೆಕೆರೆ ಹಾಗೂ ಭರ್ಮಪುರದಲ್ಲಿರುವ ಕುಡಿಯುವ ನೀರಿನ ಬಾವಿಗಳಿಂದ ನೀರನ್ನು ತೆಗೆದುಕೊಳ್ಳದಂತೆ ತಡೆದಿರುವುದು

ಶ್ರೀ ಆರ್. ರಾಮಯ್ಯ (ಹಿರಿಯೂರು).—ಸನ್ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನ ಸೊಂಡೆಕೆರೆ ಮತ್ತು ಭರ್ಮಪುರ ಗ್ರಾಮಗಳಲ್ಲಿ ಪುರಾತನ ಕಾಲದಿಂದಲೂ ಈ ಗ್ರಾಮದ ಜನತೆ ಕುಡಿಯಲು ಬಳಸುತ್ತಿದ್ದ ನೀರು ಬಾವಿಗಳನ್ನು, ಇತ್ತೀಚಿನ ದಿನಗಳಲ್ಲಿ ಕೆಲವು ಕೋಮು ದುಷ್ಟ ಶಕ್ತಿಗಳು ತಮಗಿರುವ ರಾಜಕೀಯ ಪ್ರಭಾವದಿಂದ ಇವುಗಳನ್ನು ತಮ್ಮ ಸಾಗುವಳಿ ಜಮೀನುಗಳಲ್ಲಿ ಇರುವಂತೆ ರೆಕಾರ್ಡ್ ತಯಾರಿಸಿಕೊಂಡಿದ್ದು ಬಲವಂತದಿಂದ ಈ ಬಾವಿಗಳ ಉಪಯೋಗದಿಂದ ಹೊರಹಾಕಿ ತಮ್ಮ ಸಾಗುವಳಿ ಜಮೀನುಗಳಲ್ಲಿನ ಬಾವಿಯಂತೆ ಪಂಪ್‌ಸೆಟ್ ಅಳವಡಿಸಿಕೊಂಡು ಜಮೀನಿಗೆ ನೀರು ಹಾಯಿಸಿಕೊಳ್ಳುತ್ತಿದ್ದಾರೆ.

ಯಾವತ್ತೂ ಬತ್ತದೆ ಮತ್ತು ಸದಾ ಸಿಹಿ ನೀರನ್ನು ಕುಡಿದು ಆನಂದಿಸುತ್ತಿದ್ದ ಜನತೆಗೆ ಇದರಿಂದ ಅನ್ಯಾಯವಾಗಿ ರಾಜಕೀಯದ ಕುಮ್ಮಕ್ಕಿನಿಂದ ತಮಗಿರುವ ನೋವನ್ನು ಹೇಳಿಕೊಳ್ಳದೆ ಭಯಗ್ರಸ್ತರಾಗಿದ್ದಾರೆ. ಈ ಎರಡು ಊರುಗಳಲ್ಲಿ ಪರಿಶಿಷ್ಟ ಜಾತಿಯವರಿಗೆ ಕುಡಿಯುವ ಬಾವಿಗಳಿದ್ದು, ಹಿಂದಿನಿಂದಲೂ ತಮ್ಮ ಪೂಜಾದೇವತೆಗಳಿಗೆ ಗಂಗೋಧಕವನ್ನು ಅಪೋಷಿಸುತ್ತಿರುವುದು ಕೈತಪ್ಪಿದೆ. ಇದರಿಂದಾಗಿ ಇವರಿಗೆ ಮಹತ್ತರ ಅನ್ಯಾಯ ಮತ್ತು ಗಂಗಾಸ್ನಾನಕ್ಕೆ ಬೇರೆ ದಾರಿಯಿಲ್ಲವಾಗಿದೆ.